ಅಸಲು ದಾವಾ 186/2022 **DW** 2- ಚನ್ನೇಗೌಡ

**<u>ಸಾಕ್ಷಿಯನ್ನು ದಿನಾಂಕಃ02.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಬಿ ವಕೀಲರಿಂದಃ</u>**

1. ಈ ಕೇಸನ್ನು ಹಾಕಿರುವ ರಮೇಶ ನನಗೆ ಗೊತ್ತು. ನನಗೆ ಪ್ರತಿವಾದಿಯರು ಗೊತ್ತು. ನಾವೆಲ್ಲರೂ ಒಂದೇ ಗ್ರಾಮದವರು. ವಾದಿಯ ತಾತ ಸರ್ವೇಗೌಡ @ ಮಂಗೇಗೌಡರ ಬಗ್ಗೆ ನನಗೆ ಗೊತ್ತಿಲ್ಲ. ಅವರು ಮಕ್ಕಳು ಮಂಗೇಗೌಡ @ ಬಗ್ಗೇಗೌಡ, ಭದ್ರೇಗೌಡ ಮತ್ತು ಬಿ ವೀರಣ್ಣಗೌಡ ರವರು ಗೊತ್ತಾ ಎಂದರೆ, ಅವರು ಅಣ್ಣ ತಮ್ಮಂದಿರು ಎಂದು ಗೊತ್ತು, ನಾನು ಅವರನ್ನು ನೋಡಿಲ್ಲ. ಹೊನ್ನಲಗೇಗೌಡನ ತಂದೆಯ ಹೆಸರು ಮಂಗೇಗೌಡ ಬಿನ್ ದೇವರ ವೀರಣ್ಣಗೌಡ ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ಹೊನ್ನಲಗೇಗೌಡ ಗ್ರಾಮ ಲೆಕ್ಕಾಧಿಕಾರಿಯಾಗಿದ್ದರು ಎಂದರೆ ಸರಿ. ಪೂರ್ವಕ್ಕೆ – ಕೊಂಬಲನ ವೀರಣ್ಣ ವಗೈರೆ ಜಮೀನು, ಪಶ್ಚಿಮಕ್ಕೆ – ಬುಡ್ಡನ ಜಮೀನು, ಉತ್ತರಕ್ಕೆ– ಸರ್ಕಾರಿ ರೋಡ್, ದಕ್ಷಿಣಕ್ಕೆ – ಕಟ್ಟೆ ಏರಿ ಈ ಮಧ್ಯೆ ಇರುವ 18 ಗುಂಟೆ ಹಿಡುವಳಿ ಹಾಗೂ 10 ಗುಂಟೆ ಕರಾಬು ಇರುವ ಒಟ್ಟು 28 ಗುಂಟೆ ಜಮೀನನ್ನು ನಾನು ನೋಡಿದ್ದೇನೆ. ಸದರಿ ಜಮೀನನ್ನೇ 2 ನೇ ಪ್ರತಿವಾದಿ ತಾನು ಕ್ರಯಕ್ಕೆ ತೆಗೆದುಕೊಂಡಿರುವುದಾಗಿ ಹೇಳುತ್ತಿದ್ದಾರೆ ಎಂದರೆ ಸರಿ. ಹೊನ್ನಲಗೇಗೌಡನ ತಂದೆ ಸದರಿ ಜಮೀನನ್ನು ದಿಃ19.04.1949 ರಲ್ಲಿ ಮಂಗೇಗೌಡ @ ಬಗ್ಗೇಗೌಡನಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಕೊಂಡುಕೊಂಡ ನಂತರ ಸರ್ವೆ ಮಂಗೇಗೌಡನ 3 ಜನ ಮಕ್ಕಳು ಆ ಜಮೀನಿನ ಸ್ವಾಧೀನದಲ್ಲಿ ಇದ್ದರು

ಎಂದರೆ ಸರಿಯಲ್ಲ, ನಿಂಗಮ್ಮ ಸ್ವಾಧೀನದಲ್ಲಿ ಇದ್ದರು. ಕ್ರಯದಾರರು ಸ್ವಾಧೀನದಲ್ಲಿ ಇದ್ದರು, ಮಾರಾಟ ಮಾಡಿದ ನಂತರ ನಿಂಗಮ್ಮ, ಅವರ ಗಂಡ ಅಥವಾ ಅವರ ಮಾವ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ಮಂಗೇಗೌಡನ 3 ಜನ ಮಕ್ಕಳು ಅವರ ಪಿತ್ರಾರ್ಜಿತ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ದಾವಾ ಆಸ್ತಿ 28 ಗುಂಟೆ ಜಮೀನಿನ ಪೈಕಿ ಉತ್ತರ ಭಾಗದ 10 ಗುಂಟೆ ಎಂದರೆ ನನಗೆ ಅರ್ಥವಾಗುತ್ತಿಲ್ಲ. ಈ ಕೇಸನ್ನು ಎಷ್ಟು ಗುಂಟೆ ಜಮೀನಿಗೆ ಹಾಕಲಾಗಿದೆ ಎಂದು ನನಗೆ ಗೊತ್ತಿಲ್ಲ. ವಾದಿಯು ಈ ಕೇಸನ್ನು 28 ಗುಂಟೆ ಜಮೀನಿನ ಪೈಕಿ ಉತ್ತರ ಭಾಗದ 10 ಗುಂಟೆಗೆ ಸಲ್ಲಿಸಿದ್ದಾರೆ ಎಂದರೆ ಅವರು ಯಾವತ್ತೂ ಜಮೀನನ್ನು ಉಳುಮೆ ಮಾಡಿಲ್ಲ, ಒಟ್ಟು ಆಸ್ತಿಯಲ್ಲಿ ನಿಂಗಮ್ಮ ಸ್ವಾಧೀನದಲ್ಲಿ ಇದ್ದರು, ಅವರು ಮಾರಾಟ ಮಾಡಿದ್ದಾರೆ. ಅವರ ಕುಟುಂಬದಲ್ಲಿ ಭಾಗ ಆದಾಗ ಉತ್ತರ ಭಾಗದ 10 ಗುಂಟೆ ಜಮೀನು ವಾದಿಯ ತಂದೆಗೆ ಬಂದಿತ್ತು ಎಂದರೆ ಅವರು ಆ ಜಮೀನನ್ನು ಉಳುಮೆ ಮಾಡಿದ್ದೇ ಇಲ್ಲ. ಆಗಿನಿಂದಲೂ ಸದರಿ ಜಮೀನನ್ನು ವಾದಿಯ ತಂದೆ ವ್ಯವಸಾಯ ಮಾಡುತ್ತಿದ್ದರು ಎಂದರೆ ಅವರು ವ್ಯವಸಾಯ ಮಾಡಿದ್ದನ್ನೇ ನಾನು ನೋಡಿಲ್ಲ. ಬಿ ವೀರಣ್ಣಗೌಡರ ಮಕ್ಕಳು ಭಾಗ ಆಗಿದ್ದಾರೆ ಎಂದರೆ ಸರಿ. ಆ ಭಾಗದಲ್ಲಿ ದಾವಾ ಸ್ವತ್ತು ವಾದಿಯ ಭಾಗಕ್ಕೆ ಬಂದಿದೆ ಎಂದರೆ ಅದು ನನಗೆ ಗೊತ್ತಿಲ್ಲ. ದಾವಾ ಆಸ್ತಿ 10 ಗುಂಟೆಯಲ್ಲಿ ಇವತ್ತಿನ ವರೆಗೂ ವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 1968-69 ರಲ್ಲಿ ಹೊಸದಾಗಿ ಖಾತೆ ಬರೆಯಲು ಪ್ರಾರಂಭವಾದ ನಂತರ

1 ನೇ ಪ್ರತಿವಾದಿಯ ಗಂಡ ಹೊನ್ನಲಗೇಗೌಡ ಗ್ರಾಮ ಲೆಕ್ಕಾಧಿಕಾರಿಯಾಗಿದ್ದರಿಂದ ಅವರ ಹೆಸರಿಗೆ ಬರೆಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಕ್ರಯದಾರರ ಹೆಸರಿಗೆ ಆರ್ ಟಿ ಸಿ ಬದಲಾವಣೆ ಆಗಿರಲಿಲ್ಲ, ಆರ್ ಟಿ ಸಿ ತಪ್ಪಾಗಿ ಬರುತ್ತಿತ್ತು ಎಂದರೆ ಆ ಆಸ್ತಿ ನಿಂಗಮ್ಮನ ಗಂಡನ ಪಿತ್ರಾರ್ಜಿತ ಸ್ವತ್ತು, ಅವರ ಹೆಸರಿನಲ್ಲಿ ಬರುತ್ತಿತ್ತು. ನಿಂಗಮ್ಮನ ಮಾವನಿಂದ ಖರೀದಿ ಮಾಡಿದವರು 2 ನೇ ಪ್ರತಿವಾದಿಯ ದೊಡ್ಡತಾತ ಎಂದರೆ ಸರಿ. ಆ ಜಮೀನನ್ನು ನಿಂಗಮ್ಮನ ಮಾವ ಮಾರಾಟ ಮಾಡಿದ್ದರಿಂದ ಅದನ್ನುಪುನಃ ಮಾರಾಟ ಮಾಡುವ ಹಕ್ಕು ನಿಂಗಮ್ಮನಿಗೆ ಇರಲಿಲ್ಲ ಎಂದರೆ, ಮೊದಲು ಮಾರಾಟ ಮಾಡಿದ್ದ ವಿಷಯ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯಿಂದ 2 ನೇ ಪ್ರತಿವಾದಿ ಕ್ರಯಕ್ಕೆ ಪಡೆದ ಮಾತುಕತೆಗೆ ನಾನು ಸೇರಿರಲಿಲ್ಲ. ನಾನು 2 ನೇ ಪ್ರತಿವಾದಿಯನ್ನು ಕ್ರಯ ಪತ್ರಕ್ಕೆ 1 ನೇ ಪ್ರತಿವಾದಿಯ ಮಕ್ಕಳು ಸಹಿ ಹಾಕಿದ್ದಾರಾ ಎಂದು ಕೇಳಿಲ್ಲ. 1 ನೇ ಪ್ರತಿವಾದಿಯ ಬಳಿ ಸ್ವಾಧೀನ ಇಲ್ಲದಿದ್ದ ಕಾರಣ 2 ನೇ ಪ್ರತಿವಾದಿಗೆ ಸ್ವಾಧೀನ ಕೊಟ್ಟಿಲ್ಲ ಎಂದರೆ ಸರಿಯಲ್ಲ.

2. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ – ಚಿಕ್ಕೋನು, ಪಶ್ಚಿಮಕ್ಕೆ – ನಿಂಗಮ್ಮ @ ದೊಡ್ಡತಾಯಮ್ಮ, ಉತ್ತರಕ್ಕೆ – ರಸ್ತೆ ಹಾಗೂ ದಕ್ಷಿಣಕ್ಕೆ – 2 ನೇ ಪ್ರತಿವಾದಿ ಸ್ವಾಧೀನದಲ್ಲಿರುವ ಜಮೀನು ಎಂದರೆ ಸರಿ. ದಾವಾ ಸ್ವತ್ತಿಗೆ ಮತ್ತು ನನ್ನ ಆಸ್ತಿಗೆ ಎಷ್ಟು ದೂರ ಇದೆ ಎಂದರೆ ಇಲ್ಲಿಂದ ತಹಶೀಲ್ದಾರ್ ರವರ ಕಛೇರಿಗೆ ಇರುವಷ್ಟು ದೂರ ಆಗುತ್ತದೆ. ನಮ್ಮ ಗ್ರಾಮದಿಂದ ದಾವಾ ಸ್ವತ್ತು ಸುಮಾರು 1 ಕಿ ಮೀ ದೂರ ಇದೆ. ಆ ಒಂದು ಕಿ ಮೀಟರ್

ದೂರದಲ್ಲಿ ರಸ್ತೆಯ ಪಕ್ಕದಲ್ಲಿ ಇರುವ ಎಲ್ಲರ ಜಮೀನನ್ನು ಹೇಳಲು ನನಗೆ ನೆನಪಿಲ್ಲ. ನನಗೆ ಆ ರಸ್ತೆಯ ಪಕ್ಕ ಯಾವುದೇ ಜಮೀನು ಇಲ್ಲ , ನಾನು ಅದರಲ್ಲಿ ಹೋಗುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಪರ ನಾನು ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದನ್ನು 2 ನೇ ಪ್ರತಿವಾದಿ ಹೇಳಿ ಬರೆಸಿದ್ದು ನಾನು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

**1** ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.

ಅಸಲು ದಾವಾ 186/2022 **DW** 2- ಚನ್ನೇಗೌಡ